ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಮತ್ತು ಕರ್ನಾಟಕ ಹೈದರಾಬಾದ್ ಅಭಿವೃದ್ಧಿ ಮಂಡಳಿ ಸಚಿವರು) :

ಅ) ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯ ಆಧೀನದಲ್ಲಿ ನಗರ ಯೋಜನಾ ಇಲಾಖೆ ಮತ್ತು ಪೌರಾಡಳಿತ ನಿರ್ದೇಶನಾಲಯಗಳಿರುತ್ತವೆ. ನಗರ ಯೋಜನಾ ಇಲಾಖೆಯಲ್ಲಿ ಒಟ್ಟು 70 ಮತ್ತು ಪೌರಾಡಳಿತ ನಿರ್ದೇಶನಾಲಯದಲ್ಲಿ ಒಟ್ಟು 171 ವರ್ಗಾವಣೆ ಮಾಡಲಾಗಿದೆ.

ಆ) ನಗರ ಯೋಜನಾ ಇಲಾಖೆಯಲ್ಲಿ ಸರ್ಕಾರದಿಂದ ಮಾಡಲಾದ ವರ್ಗಾವಣೆ ಸಂಖ್ಯೆ: 37 ಹಾಗೂ ಕೋರಿಕೆ ಮೇಲೆ ಮಾಡಲಾದ ವರ್ಗಾವಣೆ ಸಂಖ್ಯೆ 33. ಪೌರಾಡಳಿತ ನಿರ್ದೇಶನಾಲಯದಲ್ಲಿ ಸರಕಾರದಿಂದ ಮಾಡಿರುವ ವರ್ಗಾವಣೆ ಸಂಖ್ಯೆ 171 ಕೋರಿಕೆ ಮೇಲೆ ವರ್ಗಾವಣೆ ಮಾಡಿರುವುದಿಲ್ಲ.

ಇ) ನಗರ ಯೋಜನಾ ಇಲಾಖೆಯಲ್ಲಿ ಸರ್ಕಾರದ ಬೊಕ್ಕಸಕ್ಕೆ ಇಲ್ಲಿಯವರೆಗೆ ರೂ. 45.206 ಖರ್ಚಾಗಿರುತ್ತದೆ. ಮತ್ತು ಪೌರಾಡಳಿತ ನಿರ್ದೇಶನಾಲಯದಲ್ಲಿ ಸರ್ಕಾರದ ಬೊಕ್ಕಸಕ್ಕೆ ರೂ. 3,37,000 ಖರ್ಚಾಗಿರುತ್ತದೆ.

ಈ) ನಗರ ಯೋಜನಾ ಇಲಾಖೆಯಲ್ಲಿ 3 ವರ್ಷದೊಳಗಡೆ ವಯೋ ನಿವೃತ್ತಿ ಮೇರೆಗೆ 3 ಮಂದಿಯನ್ನು ಅವರ ಕೋರಿಕೆಯ ಮೇರೆಗೆ ವರ್ಗಾವಣೆ ಮಾಡಲಾಗಿದೆ. ಅವುಗಳನ್ನು ರದ್ದು ಪಡಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಪೌರಾಡಳಿತ ನಿರ್ದೇಶನಾಲಯದಲ್ಲಿ ನಿವೃತ್ತಿ ಅಂಚಿನಲ್ಲಿರುವವರನ್ನು ಯಾರನ್ನೂ ವರ್ಗಾವಣೆ ಮಾಡಿರುವುದಿಲ್ಲ.

ಉಡುಪಿ ತಾಲ್ಲೂಕಿನಲ್ಲಿ ಬೃಹತ್ ಕೈಗಾರಿಕೆ ಸ್ಥಾಪನೆ ಬಗ್ಗೆ.

2106 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ತಾಲ್ಲೂಕಿನಲ್ಲಿ ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸಲು ಪರವಾನಿಗೆ ನೀಡಲಾಗಿರುವುಗಳ ಸಂಖ್ಯೆ ಎಷ್ಟು?

ಆ) ಉಡುಪಿ ತಾಲ್ಲೂಕಿನಲ್ಲಿ ಯಾವ ಯಾವ ಬೃಹತ್ ಕೈಗಾರಿಕೆಗಳಿಗೆ ಎಷ್ಟು ಎಕರೆ ಭೂಮಿ ಸ್ವಾಧೀನಪಡಿಸಿಕೊಳ್ಳಲಾಗಿದೆ ಮತ್ತು ಇನ್ನು ಎಷ್ಟು ಎಕರೆ ಭೂಮಿ ಸ್ವಾಧೀನಪಡಿಸಿಕೊಳ್ಳಲಾಗುವುದು

ಇ) ಈಗ ಪರವಾನಿಗೆ ನೀಡಿರುವ ಬೃಹತ್ ಕೈಗಾರಿಕೆಗಳ ಯೋಜನಾ ವರದಿ ಏನು? (ಯೋಜನಾ ವರದಿಯ ಯಥಾಪ್ರತಿ ನೀಡುವುದು)

ಶ್ರೀ ಆರ್. ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು) :

ಅ) ಉಡುಪಿ ತಾಲ್ಲೂಕಿನಲ್ಲಿ ಒಂದು ಬೃಹತ್ ಕಬ್ಬಿಣ ಕಾರ್ಖಾನೆಯನ್ನು ಸ್ಥಾಪಿಸಲು ಉನ್ನತ ಮಟ್ಟದ ಸಮಿತಿಯ ವತಿಯಿಂದ ಶಿಫಾರಸ್ಸು ಮಾಡಲಾಗಿದೆ.

ಆ) ಯೋಜನೆಗೆ ಸರ್ಕಾರದ ಅನುಮೋದನೆ ಪಡೆದ ನಂತರ ಈ ವಿವರಗಳು ತಿಳಿದುಬರುವುದು.

ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ.

2107 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಸಣ್ಣ ಪ್ರಮಾಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಸರ್ಕಾರದಿಂದ ಮಂಜೂರಾದ ಹುದ್ದೆಗಳ ಸಂಖ್ಯೆ ಎಷ್ಟು

ಆ) ಸದರಿ ಮಂಡಳಿಯಲ್ಲಿ ಖಾಲಿಯಿರುವ ಅಧಿಕಾರಿಗಳು ಹಾಗೂ ಅಧಿಕಾರೇತರ ಹುದ್ದೆಗಳ ಒಟ್ಟು ಸಂಖ್ಯೆ ಎಷ್ಟು?

ಇ) ನಿವೃತ್ತಿಯಿಂದ ಖಾಲಿಯಾಗಿರುವ ಹುದ್ದೆ ಎಷ್ಟು?

ಈ) ಖಾಲಿ ಇರುವ ಹುದ್ದೆಯನ್ನು ಯಾವಾಗ ಭರ್ತಿ ಮಾಡಲಾಗುವುದು?

ಶ್ರೀ ಎನ್. ಎಂ. ನಬಿ (ಸಣ್ಣ ಪ್ರಮಾಣ ಕೈಗಾರಿಕೆಗಳ ಸಚಿವರು) :

ಅ) 574.

ಆ) 228.

ಇ) 223.

ಈ) ಖಾಲಿ ಇರುವ 31 ತಾಂತ್ರಿಕ ಮೇಲ್ವಿಚಾರಕರು ಹಾಗೂ 15 ತಾಂತ್ರಿಕ ಸಹಾಯಕರ ಹುದ್ದೆಗಳನ್ನು ನೇರ ನೇಮಕಾತಿಯಿಂದ ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಉಳಿದ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಪ್ರಸ್ತಾವನೆ ಮಂಡಳಿ ಹಾಗೂ ಸರ್ಕಾರದ ಪರಿಶೀಲನೆಯಲ್ಲಿದೆ.

ಮಂಗಳೂರಿನ ಮರಕಡ ಬಡಾವಣೆಯಲ್ಲಿ ಕೆ.ಹೆಚ್.ಬಿ.ಯವರು ನಿರ್ಮಿಸಿರುವ ಮನೆಗಳ ಬಗ್ಗೆ.

2108 - ಶ್ರೀ ಕುಂಬ್ಲೆ ಸುಂದರರಾವ್ (ಸುರತ್ಕಲ್) : ಮಾನ್ಯ ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ.ಹೆಚ್.ಬಿ.ಯವರು ಮಂಗಳೂರಿನ ಮರಕಡ ಬಡಾವಣೆಯಲ್ಲಿ ನಿರ್ಮಿಸಿದ ವಿವಿಧ ವರ್ಗಗಳ ಒಟ್ಟು ಮನೆಗಳ ಸಂಖ್ಯೆ ಎಷ್ಟು ಈ ಮನೆಗಳಿಗೆ ನಿಗದಿಪಡಿಸಿದ ಮೌಲ್ಯ ಎಷ್ಟು